# ಗ್ರಾಮ ಪಂಚಾಯಿತಿ ಸಂಪನ್ಮೂಲ

ಜನಾಧಿಕಾರ 24

## ಜನಾಧಿಕಾರ



ಎಸ್. ಜನಾರ್ದನ ಮರವಂತೆ
9448501879

***ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮವು ಗ್ರಾಮ ಪಂಚಾಯಿತಿಗಳಿಗೆ ಮಾತ್ರ ತೆರಿಗೆ, ಶುಲ್ಕ, ದರಗಳನ್ನು ವಿಧಿಸಿ ಸಂಗ್ರಹಿಸುವ ಮೂಲಕ ತನ್ನದೇ ಸಂಪನ್ಮೂಲ ಕ್ರೋಢೀಕರಿಸಲು ಅಧಿಕಾರ ನೀಡಿದೆ. ಪ್ರಕರಣ 58 ಅದನ್ನು ಅನುಷ್ಠಾನಿಸುವುದನ್ನು ಕಡ್ಡಾಯಗೊಳಿಸಿದೆ. ಗ್ರಾಮ ಪಂಚಾಯಿತಿಯ ಹೊಣೆಗಾರಿಕೆಯಾಗಿರುವ ಗ್ರಾಮದ ಅಭಿವೃದ್ಧಿಗೆ ಅಗತ್ಯವಿರುವ ನಿಧಿ ಕ್ರೋಢೀಕರಿಸಲು ಅದಕ್ಕೆ ದೊರಕಿರುವ ಒಂದು ಮಹತ್ವದ ಅವಕಾಶ ಇದಾಗಿದೆ.***

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮವು ಗ್ರಾಮ ಪಂಚಾಯಿತಿಗಳಿಗೆ ಮಾತ್ರ ತೆರಿಗೆ, ಶುಲ್ಕ, ದರಗಳನ್ನು ವಿಧಿಸಿ ಸಂಗ್ರಹಿಸುವ ಮೂಲಕ ತನ್ನದೇ ಸಂಪನ್ಮೂಲ ಕ್ರೋಢೀಕರಿಸಲು ಅಧಿಕಾರ ನೀಡಿದೆ. ಪ್ರಕರಣ 58 ಅದನ್ನು ಅನುಷ್ಠಾನಿಸುವುದನ್ನು ಕಡ್ಡಾಯಗೊಳಿಸಿದೆ. ಗ್ರಾಮ ಪಂಚಾಯಿತಿಯ ಹೊಣೆಗಾರಿಕೆಯಾಗಿರುವ ಗ್ರಾಮದ ಅಭಿವೃದ್ಧಿಗೆ ಅಗತ್ಯವಿರುವ ನಿಧಿ ಕ್ರೋಢೀಕರಿಸಲು ಅದಕ್ಕೆ ದೊರಕಿರುವ ಒಂದು ಮಹತ್ವದ ಅವಕಾಶ ಇದಾಗಿದೆ. ಅಧಿನಿಯಮದ 4ನೆಯ ಅನುಸೂಚಿ, 13ನೆಯ ಅಧ್ಯಾಯ, ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಯ ತೆರಿಗೆಗಳು ಮತ್ತು ಫೀಸುಗಳು) ನಿಯಮಗಳು, 1994 ಮತ್ತು ಸರಕಾರದ ಗ್ರಾಅಪ380:ಗ್ರಾಪಂ:1:2002 ದಿನಾಂಕ 24-05-2003 ಸಂಖ್ಯೆಯ ಸುತ್ತೋಲೆ ತೆರಿಗೆ, ಶುಲ್ಕ ಮತ್ತು ದರಗಳನ್ನು ವಿಧಿಸುವ ಹಾಗೂ ಸಂಗ್ರಹಿಸುವ ವಿಧಿ, ವಿಧಾನಗಳನ್ನು ಒಳಗೊಂಡಿವೆ. [ಅಧಿನಿಯಮ ಮತ್ತು ನಿಯಮಗಳಲ್ಲಿ ತೆರಿಗೆ, ದರ ಮತ್ತು ಶುಲ್ಕ ಎಂಬ ಪದಗಳ ಅರ್ಥವಿವರಣೆ ನೀಡಿಲ್ಲ. ಅದರೆ ಸಾಂದರ್ಭಿಕವಾಗಿ ಅರ್ಥೈಸುವುದಾದರೆ ವ್ಯಕ್ತಿ ಹೊಂದಿರುವ ಸ್ಥಿರ, ಚರ ಸ್ವತ್ತಿನ ಮೇಲೆ ಹೊರಿಸಲ್ಪಡುವುದು ತೆರಿಗೆ (ಉದಾ : ಆಸ್ತಿ ತೆರಿಗೆ), ಗ್ರಾಮ ಪಂಚಾಯಿತಿ ಒದಗಿಸುವ ಸೇವೆಯ ಮೇಲೆ ವಿಧಿಸುವುದನ್ನು ದರ (ಉದಾ : ನೀರಿನ ದರ) ಮತ್ತು ಗ್ರಾಮ ಪಂಚಾಯಿತಿ ಸೃಜಿಸಿದ ವ್ಯವಸ್ಥೆಯ ಬಳಕೆಗಾಗಿ ಪಾವತಿಸಬೇಕಾಗಿರುವುದು ಶುಲ್ಕ (ಉದಾ : ಬಸ್ ನಿಲ್ದಾಣ, ಮಾರುಕಟ್ಟೆ) ಎಂದು ಭಾವಿಸಬಹುದು.]

ಅಧಿಕಾರ ವ್ಯಾಪ್ತಿ : ಅಧಿನಿಯಮದ 13ನೆ ಅಧ್ಯಾಯವು (ಪ್ರಕರಣ 199ರಿಂದ 203) ಅನುಸೂಚಿ 4ರಲ್ಲಿ ನಿರ್ದಿಷ್ಟಪಡಿಸಿದ ದರದ ಮಿತಿಯೊಳಗೆ ಗ್ರಾಮ ಪಂಚಾಯಿತಿಯು ಈ ಮುಂದಿನವುಗಳ ಮೇಲೆ ತೆರಿಗೆ, ದರ ಮತ್ತು ಶುಲ್ಕ ವಿಧಿಸಲು ಅಧಿಕಾರ ನೀಡಿದೆ. 1. ಕಟ್ಟಡಗಳು 2. ಕೃಷಿ ಕರ ನಿರ್ಧರಣೆಗೆ ಒಳಪಟ್ಟಿರದ ಅಂದರೆ ಕೃಷಿಯೇತರ ಉದ್ದೇಶಕ್ಕೆ ಪರಿವರ್ತಿತವಾದ ಭೂಮಿ. 3. ಚಲನಚಿತ್ರ ಪ್ರದರ್ಶನವನ್ನು ಹೊರತುಪಡಿಸಿ ಇತರ ಮನೋರಂಜನೆಗಳು. 4. ಮೋಟರು ವಾಹನ ಹೊರತುಪಡಿಸಿದ ವಾಹನಗಳು. 5. ಜಾಹೀರಾತುಗಳು. 6. ಜಾತ್ರೆ ಮತ್ತು ಉತ್ಸವಗಳು. 7. ಮಾರುಕಟ್ಟೆ 8. ಬಸ್, ಟ್ಯಾಕ್ಸಿ ಮತ್ತು ಆಟೊ ಸ್ಟ್ಯಾಂಡ್ 9. ಹುಲ್ಲುಗಾವಲು. 10. ಸಂತೆ ಅಥವಾ ಜಾತ್ರೆಗಳಲ್ಲಿ ಮಾರಲು ತರುವ ಜಾನುವಾರು 11. ಗ್ರಾಮ ಪಂಚಾಯಿತಿ ಪೂರೈಕೆ ಮಾಡಿದ ನೀರು.

**ಪೂರ್ವಭಾವಿ ಕ್ರಮ :**

ಗ್ರಾಮ ಪಂಚಾಯಿತಿಯು ವಿಧಿಸಲು ಉದ್ದೇಶಿಸಿದ ತೆರಿಗೆ, ಶುಲ್ಕ, ದರಗಳ ಪ್ರಸ್ತಾವನೆ ಒಳಗೊಂಡ ನಿರ್ಣಯವನ್ನು ಸ್ವೀಕರಿಸಬೇಕು. ಅದನ್ನು ಕಚೇರಿಯ ನೋಟೀಸ್ ಬೋರ್ಡ್‌ನಲ್ಲಿ ಮತ್ತು ಪಂಚಾಯಿತಿ ಪ್ರದೇಶದ ಇತರ ಪ್ರಮುಖ ಸ್ಥಳಗಳಲ್ಲಿ ಪ್ರಕಟಿಸುವ ಮೂಲಕ ಸಾರ್ವಜನಿಕರಿಗೆ ಅದನ್ನು ಪರಿಶೀಲಿಸಲು ಮತ್ತು ಆಕ್ಷೇಪಣೆಗಳನ್ನು ಸಲ್ಲಿಸಲು ಕನಿಷ್ಠ 30 ದಿನಗಳ ಅವಕಾಶ ನೀಡಬೇಕು. ಸಾರ್ವಜನಿಕರಿಂದ ಬಂದ ಆಕ್ಷೇಪಣೆಗಳನ್ನು ಆ ಅವಧಿ ಮುಗಿದ ಬಳಿಕ ಪರ್ಯಾಲೋಚನೆಗೆ ಒಳಪಡಿಸಿ ಸ್ವೀಕಾರ ಯೋಗ್ಯವಾಗಿರುವುದನ್ನು ಸ್ವೀಕರಿಸಿ, ಅಸ್ವೀಕಾರಾರ್ಹವಾಗಿರುವುದನ್ನು ತಿರಸ್ಕರಿಸಿ ಪ್ರಸ್ತಾವನೆಯಲ್ಲಿ ಅಗತ್ಯವೆನಿಸಿದ ಮಾರ್ಪಾಡುಗಳನ್ನು ಮಾಡಬೇಕು. ಆ ಪ್ರಕ್ರಿಯೆಗೆ ಒಳಗಾದ ಬಳಿಕ ರೂಪಿಸಿದ ಅಂತಿಮ ಪ್ರಸ್ತಾವನೆಯ ಜಾರಿಗೆ ಮತ್ತೆ ಕನಿಷ್ಠ ಮೂವತ್ತು ದಿನಗಳ ಗಡುವು ನೀಡಿ, ಯಾವ ದಿನದಿಂದ ಅದು ಜಾರಿಯಾಗುತ್ತದೆ ಎಂಬ ಮಾಹಿತಿಯೊಂದಿಗೆ ಅದನ್ನು ಇನ್ನೊಮ್ಮೆ ಹಿಂದಿನ ಕ್ರಮದಲ್ಲೇ ಪ್ರಕಟಿಸಬೇಕು.

ವಿವಿಧ ತೆರಿಗೆ, ದರ, ಶುಲ್ಕ ವಿಧಿಸಿ, ಸಂಗ್ರಹಿಸುವ ವಿಧಾನಗಳ ವಿವರಗಳನ್ನು ಒಂದೊಂದಾಗಿ ಮುಂದೆ ನೀಡಿದೆ.

**1.ಕಟ್ಟಡ ತೆರಿಗೆ**

ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿರುವ ಕಟ್ಟಡಗಳ ವಾರ್ಷಿಕ ಬಾಡಿಗೆ ಮೌಲ್ಯದ ಶೇಕಡಾ 10 ಮೀರದಂತೆ ಕಟ್ಟಡ ತೆರಿಗೆ ವಿಧಿಸಬಹುದು. ಮೇಲೆ ಹೇಳಿದ ಪೂರ್ವಭಾವಿ ಕ್ರಮದ ಬಳಿಕ ಗ್ರಾಮ ಪಂಚಾಯಿತಿ ಅಧಿಕಾರಿಯು ಆದಷ್ಟು ಬೇಗ, ಆದರೆ ಡಿಸೆಂಬರ್ ತಿಂಗಳ ಒಂದನೆ ತಾರೀಕಿನ ಒಳಗೆ ಕಟ್ಟಡ ತೆರಿಗೆ ನಿರ್ಧರಣಾ ಪಟ್ಟಿಯನ್ನು ಸಿದ್ಧಪಡಿಸಬೇಕು. ಈ ಪಟ್ಟಿಯು ಕಟ್ಟಡದ ಸಂಖ್ಯೆ, ಅದರ ಮಾಲೀಕ ಮತ್ತು ಅಧಿಭೋಗದಾರನ ಹೆಸರು, ಕಟ್ಟಡದ ಬಾಡಿಗೆ ಮೌಲ್ಯ ಮತ್ತು ಅದರ ಆಧಾರದಲ್ಲಿ ವಿಧಿಸಿದ ತೆರಿಗೆಯ ವಿವರಗಳನ್ನು ಒಳಗೊಂಡಿರಬೇಕು. ಆ ಬಳಿಕ ಈ ಪಟ್ಟಿ ಮುಂದಿನ ಮೂವತ್ತು ದಿನಗಳ ವರೆಗೆ ಸಾರ್ವಜನಿಕರ ಪರಿಶೀಲನೆಗೆ ಹಾಗೂ ಆಕ್ಷೇಪಣೆ ಸಲ್ಲಿಕೆಗೆ ಲಭ್ಯವಿದೆ ಎಂಬ ನೋಟೀಸನ್ನು ಪ್ರಕಟಿಸಬೇಕು. ಆ ಅವಧಿ ಕಳೆದ ಬಳಿಕ, ಅವಧಿಯೊಳಗೆ ಬಂದ ಆಕ್ಷೇಪಣೆಗಳನ್ನು ಗ್ರಾಮ ಪಂಚಾಯಿತಿಯು ಪರಿಗಣನೆಗೆ ತೆಗೆದುಕೊಂಡು ಪಟ್ಟಿಯನ್ನು ಅಂತಿಮಗೊಳಿಸಿ, ಹಾಗೆ ಅಂತಿಮಗೊಳಿಸಿದ ಪಟ್ಟಿಯನ್ನು ಇನ್ನೊಮ್ಮೆ ಸಾರ್ವಜನಿಕರ ಅವಗಾಹನೆಗೆ ಮುಕ್ತವಾಗಿರಿಸಬೇಕು.

**ಮೇಲ್ಮನವಿ ಅವಕಾಶ :**

ವಿಧಿಸಿದ ತೆರಿಗೆಯ ವಿರುದ್ಧ ಅಂತಿಮ ಪ್ರಕಟಣೆಯ ದಿನದಿಂದ 15 ದಿನಗಳೊಳಗೆ ಜಿಲ್ಲಾ ಪಂಚಾಯಿತಿಗೆ ಮೇಲ್ಮನವಿ ಸಲ್ಲಿಸಲು ಅವಕಾಶವಿರುತ್ತದೆ. ಹಾಗೆ ಮೇಲ್ಮನವಿ ಸಲ್ಲಿಸುವ ಪೂರ್ವದಲ್ಲಿ ಮೇಲ್ಮನವಿದಾರರು ಗ್ರಾಮ ಪಂಚಾಯಿತಿ ವಿಧಿಸಿರುವ ತೆರಿಗೆಯನ್ನು ಗ್ರಾಮ ಪಂಚಾಯಿತಿಯಲ್ಲಿ ಠೇವಣಿ ಇರಿಸಬೇಕು. ಹಾಗಿದ್ದರೂ ತಡವಾಗಿ ಹಾಗೂ ತೆರಿಗೆ ಠೇವಣಿ ಇರಿಸದೆ ಸಲ್ಲಿಸಿದ ಮೇಲ್ಮನವಿಯನ್ನು ಪರಿಗಣಿಸಲು ಜಿಲ್ಲಾ ಪಂಚಾಯಿತಿಗೆ ಅಧಿಕಾರವಿದೆ. ಪ್ರತಿ ಮೇಲ್ಮನವಿ ವಿಚಾರದಲ್ಲಿ ಜಿಲ್ಲಾ ಪಂಚಾಯಿತಿ ನೀಡುವ ಆದೇಶಕ್ಕೆ ಅನುಗುಣವಾಗಿ ತೆರಿಗೆ ನಿರ್ಧರಣಾಪಟ್ಟಿಯಲ್ಲಿ ಗ್ರಾಮ ಪಂಚಾಯಿತಿಯು ಬದಲಾವಣೆ ಮಾಡಿಕೊಳ್ಳಬೇಕು. ಹಾಗೆಯೇ ಯಾವುದೇ ಕಾರಣಕ್ಕೆ ಪಟ್ಟಿಯಿಂದ ಹೊರಗುಳಿದ, ತಪ್ಪಾಗಿ ನಮೂದಾದ, ಪಟ್ಟಿ ಸಿದ್ಧಪಡಿಸಿದ ಬಳಿಕ ಬದಲಾಯಿಸಿದ, ಮರುನಿರ್ಮಿಸಿದ ಕಟ್ಟಡಗಳ ತೆರಿಗೆಯನ್ನು ಪರಿಷ್ಕರಿಸಲು ಗ್ರಾಮ ಪಂಚಾಯಿತಿ ಕ್ರಮ ತೆಗೆದುಕೊಳ್ಳಬಹುದು. ಆ ಸಂದರ್ಭದಲ್ಲಿಯೂ ಸಂಬಂಧಿಸಿದ ವ್ಯಕ್ತಿಗೆ ಪರಿಶೀಲನೆ ಮತ್ತು ಆಕ್ಷೇಪಣೆ ಸಲ್ಲಿಕೆಗೆ ಒಂದು ತಿಂಗಳ ಕಾಲಾವಕಾಶ ನೀಡಬೇಕು. ಎಪ್ರಿಲ್ ಆರಂಭದ ಬಳಿಕ ತೆರಿಗೆ ನಿರ್ಧರಣೆಯು ಬದಲಾದಲ್ಲಿ ವರ್ಷದ ಉಳಿದ ಅವಧಿಯ ಪ್ರಮಾಣ ಅನುಸರಿಸಿ ತೆರಿಗೆ ಸಂಗ್ರಹಿಸಬೇಕು.

**ಪಾವತಿಯ ಹೊಣೆ :**

ಕಟ್ಟಡದ ಮಾಲೀಕನು ತೆರಿಗೆ ಪಾವತಿಸಬೇಕು. ಮಾಲೀಕನು ಪಂಚಾಯಿತಿ ಪ್ರದೇಶದಲ್ಲಿ ಇಲ್ಲದಿದ್ದಲ್ಲಿ ಕಟ್ಟಡದ ಅನುಭವದಾರನು ಆ ತೆರಿಗೆ ಪಾವತಿಸಬೇಕು. ಅನುಭವದಾರನು ಪಾವತಿಸಿದ ತೆರಿಗೆಯ ಮೊತ್ತವನ್ನು ಮಾಲೀಕನು ಅವನಿಗೆ ಪಾವತಿಸಬೇಕು. ಸಂದರ್ಭಾನುಸಾರ ಅನುಭವದಾರನು ಪಾವತಿಸಿದ ಮೊತ್ತವನ್ನು ಅವನು ಮಾಲೀಕನಿಗೆ ಕೊಡಬೇಕಾದ ಬಾಡಿಗೆ ಅಥವಾ ಅನ್ಯ ಪಾವತಿಯಿಂದ ಕಡಿತ ಮಾಡಿಕೊಳ್ಳುವುದು ಕಾಯಿದೆ ಸಮ್ಮತವೆನಿಸುತ್ತದೆ. ಕಟ್ಟಡವನ್ನು ಕೆಡಹುವ ಅಥವಾ ತೆಗೆದುಹಾಕುವ ಸಂದರ್ಭದಲ್ಲಿ ಅದನ್ನು ಅದರ ಮಾಲೀಕನು ಪಂಚಾಯಿತಿಗೆ ಲಿಖಿತವಾಗಿ ತಿಳಿಸಬೇಕು. ಅದಕ್ಕೆ ತಪ್ಪಿದರೆ, ಹಾಗೆ ತಿಳಿಸುವ ವರೆಗೆ ತೆರಿಗೆ ಪಾವತಿಸುವ ಹೊಣೆ ಅವರಿಗೆ ಇರುತ್ತದೆ.

**ತೆರಿಗೆ ಮಾಫಿ :**

ತೆರಿಗೆ ನಿರ್ಧರಣೆಗೆ ಒಳಗಾದ ಕಟ್ಟಡವು ವರ್ಷಪೂರ್ತಿ ಅಥವಾ ವರ್ಷದಲ್ಲಿ ಅರವತ್ತು ದಿನಗಳಿಗಿಂತ ಹೆಚ್ಚು ಕಾಲ ಖಾಲಿ ಅಥವಾ ಅನುತ್ಪಾದಕವಾಗಿದ್ದರೆ ಮಾಲೀಕನು ಆ ವಿಚಾರವನ್ನು ಲಿಖಿತವಾಗಿ ತಿಳಿಸಿದರೆ ಆ ಬಳಿಕದ ಉಳಿದ ಅವಧಿಗೆ ಪ್ರಮಾಣಾನುಗತವಾಗಿ ತೆರಿಗೆ ಮಾಫಿ ಮಾಡಬೇಕಾಗುತ್ತದೆ.

**ತೆರಿಗೆ ವಿನಾಯಿತಿ :**

ಜಿಲ್ಲಾ ಪಂಚಾಯಿತಿ, ತಾಲೂಕು ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿಗಳಿಗೆ ಸೇರಿದ ಕಟ್ಟಡಗಳಿಗೆ, ಕೇಂದ್ರ ಸರಕಾರ ಮತ್ತು ಯಾವುದೇ ರಾಜ್ಯ ಸರಕಾರಕ್ಕೆ ಸೇರಿದ ಮತ್ತು ಅಂತಹ ಸರಕಾರಗಳ ಉದ್ದೇಶಗಳಿಗೆ ಉಪಯೋಗಿಸಿದ, ವಾಸ ಮತ್ತು ವಾಣಿಜ್ಯ ಉದ್ದೇಶಗಳಿಗೆ ಉಪಯೋಗಿಸಿದ ಅಥವಾ ಉಪಯೋಗಿಸಲು ಉದ್ದೇಶಿಸಿರದ ಕಟ್ಟಡಗಳಿಗೆ, ಸಂಪೂರ್ಣ ಧರ್ಮಾರ್ಥ ಅಥವಾ ಸಾರ್ವಜನಿಕರ ಧಾರ್ಮಿಕ ಉದ್ದೇಶಗಳಿಗಾಗಿ ಮಾತ್ರ ಉಪಯೋಗಿಸುವ, ಬಾಡಿಗೆಗ ಕೊಟ್ಟಿರದ ಕಟ್ಟಡಗಳಿಗೆ, ವಾರ್ಷಿಕ ಬಾಡಿಗೆ ಮೌಲ್ಯವು ಇಪ್ಪತ್ತೈದು ರೂಪಾಯಿಗಿಂತ ಕಡಿಮೆ ಇರುವ ಕಟ್ಟಡಗಳಿಗೆ ತೆರಿಗೆ ಪಾವತಿಯಿಂದ ವಿನಾಯಿತಿ ಇದೆ.

(ಮುಂದಿನ ವಾರ : ಕಟ್ಟಡ ತೆರಿಗೆ ವಿಧಿಸುವ ವಿಧಾನ)

SIMON COMFORT

Boarding & Lodging N.H.66, Chikansal Road
KUNDAPUR-576201

ಪ್ರಕೃತಿಯ ರಮ್ಯ ಮಡಿಲಲ್ಲಿ ಸುಮಧುರ ವಾಸ್ತವ್ಯ



ರೂಫ್‌ಟಾಪ್‌ನಲ್ಲಿ
4.500 ಚ.ಅ. ಸ್ಥಳ ಹಾಗೂ
500 ಜನರು
ಭಾಗವಹಿಸಬಹುದಾದ
ಪಾರ್ಟಿಹಾಲ್ ಲಭ್ಯವಿದೆ.

A/C and Non A/c Rooms are availbale

ಫೋ : 08254-235485,232485,234485-234486
ಮೊ : 9844986125, 8762783798, 8762783797
www.hotelsimoncomfort.com
email :simoncomfort.kundapur@gmail.com

ಸುಸಜ್ಜಿತವಾದ ವಿಶಾಲ ನಾನ್‌ವೆಜ್ ರೆಸ್ಟೋರೆಂಟ್ ಬಾಡಿಗೆಗೆ/ಲೀಸಿಗೆ ಲಭ್ಯವಿದೆ
ರಿಸಪ್ಷನಿಸ್ಟ್ & ರೂಮ್‌ಬಾಯ್ಸ್ ಬೇಕಾಗಿದ್ದಾರೆ
ರಾತ್ರಿ ಪಾಳಿಯಲ್ಲಿ ಕೆಲಸ ನಿರ್ವಹಿಸಲು ಯುವಕ ರಿಸೆಪ್ಷನಿಸ್ಟ್
ಆಸಕ್ತರು ಸಂಪರ್ಕಿಸಿ: 9164293989